# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

ರವರ ಕಛೇರಿ

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಬೇಲೂರು.
ದೂ.ಸಂ. 08177-222223
E.Mail : aeehsnbelur@rediffmail.com


ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2018-19/F-16/2264-65 ದಿನಾಂಕ : 04-9-18

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 29.8.18 ರ ಬುಧವಾರದಂದು ಮಾನ್ಯ ಸುಚೇತನ, ಅಧೀಕ್ಷಕ ಇಂಜಿನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ವಿವರ ;**

1.ಶ್ರೀ ನಾರಾಯಣ ಬೋವಿ, ಕಾ. ಇಂ(ವಿ), ಸಕಲೇಶಪುರ ವಿಭಾಗ.
2.ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
3.ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ.ಪ), ಸಕಲೇಶಪುರ ವಿಭಾಗ.
4.ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
5.ಶ್ರೀ ನಿಕೇಶಕುಮಾರ್ ಸಿ.ಎನ್ ಸಹಾಯಕ ಇಂಜಿನಿಯರ್(ತಾ), ಬೇಲೂರು ಉಪವಿಭಾಗ.
6.ಶ್ರೀ ಕುಮಾರ್ ಎನ್. ಡಿ. ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
7.ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
8.ಶ್ರೀ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
9.ಶ್ರೀ ರಾಘವೇಂದ್ರ, (ಪ್ರಭಾರ) ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 3 : 00 ಘಂಟೆಗೆ ಪ್ರಾರಂಭ ಮಾಡಿದರು.**

---

**ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಶ್ರೀ ಬಿ.ಎಮ್ ಸುಂದರೇಶ್ ಹಾಗೂ ಗ್ರಾಮಸ್ಥರು,ಇಂಟಿತೊಳಲು ಗ್ರಾಮದಲ್ಲಿ ಇರುವ ಹಾಲಿ 63 kva ಪರಿವರ್ತಕ ಸುಟ್ಟು ಹೋಗಿರುತ್ತದೆ ಮತ್ತು ಈ ಪರಿವರ್ತಕದ ಮೇಲೆ 38 ಸಂಖ್ಯೆ IP ಸೆಟ್‌ಗಳಿದ್ದು ಹೆಚ್ಚುವರಿಯಾಗಿ 4 ಸಂಖ್ಯೆಯ ಪರಿವರ್ತಕಗಳನ್ನು ಅಳವಡಿಸಲು UNIP ಯೋಜನೆಯ ಅಡಿಯಲ್ಲಿ ಅಂದಾಜು ಪಟ್ಟಿಯನ್ನು ಈಗಾಗಲೇ ಮಾರ್ಚ್ 2018 ರಲ್ಲಿ ತಯಾರಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಿದ್ದರು ಕಾರ್ಯದೇಶವನ್ನು ಹಾಗೂ ಕಾರ್ಯಪ್ರೇಕ್ಷಣೆಯನ್ನು ನೀಡಲಾಗಿರುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುತ್ತಾರೆ.

ಇದಕ್ಕೆ ಸಂಬಂಧಿಸಿದಂತೆ ಸಭೆಯ ಅಧ್ಯಕ್ಷರು ಹಾಲಿ ಇರುವ 63 kva ಪರಿವರ್ತಕದ ಮೇಲೆ ಕುಡಿಯುವ ನೀರಿಗೆ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿ ಬಳಸುತ್ತಿದ್ದರೆ ಅದಕ್ಕೆ ಪಿ.ಡಿ.ಒ ಕಛೇರಿಯಿಂದ ಸೆಸ್ಕ್ ಗೆ ಅರ್ಜಿಯನ್ನು ನೋಂದಯಿಸಿದ್ದಲ್ಲಿ ತಾತ್ಕಾಲಿಕವಾಗಿ 63 kva ಪರಿವರ್ತಕದ ಬದಲು 25ಕೆ.ವಿ.ಎ ಪರಿವರ್ತಕವನ್ನು ಒದಗಿಸಲಾಗುವುದು ಎಂದು ಸಭೆಯಲ್ಲಿ ಸೂಚಿಸಲಾಯಿತು. ಈಗಾಗಲೇ UNIP ಯೋಜನೆಯ ಅಡಿಯಲ್ಲಿ ಹೆಚ್ಚುವರಿಯಾಗಿ 4 ಸಂಖ್ಯೆಯ ಪರಿವರ್ತಕಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ವಿಭಾಗಿಯ ಕಛೇರಿಗೆ ಸಲ್ಲಿಸಿರುವುದಕ್ಕೆ ಕಾರ್ಯದೇಶ ಹಾಗೂ ಕಾರ್ಯಪ್ರೇಕ್ಷಣೆಯನ್ನು ಜೂನ್ 18 ರ ಮಾಹೆಯಲ್ಲಿ ನೀಡಿದ್ದು ಕಾಮಗಾರಿ ಕೈಗೆತ್ತಿಕೊಳ್ಳಲು ಬಾಕಿ ಉಳಿದಿರುತ್ತದೆ ಹಾಗೂ ಶೀಘ್ರವಾಗಿ ಪೂರ್ಣಗೊಳಿಸಲು TTK ಏಜೆನ್ಸಿಯವರಿಗೆ ತಿಳಿಸಲಾಗುವುದು ಎಂದು ಉಪವಿಭಾಗಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

2. ಶ್ರೀ ಕಾಂತರಾಜು ಹಾಗೂ ಗ್ರಾಮಸ್ಥರು, ಬಿಕ್ಕೋಡು ರವರುಗಳು , ತಮ್ಮ ಜಮೀನಿನ ಮೇಲೆ 11 ಕೆ.ವಿ ವಿದ್ಯುತ್ ಮಾರ್ಗವು ಹಾದು ಹೋಗಿದ್ದು ಮತ್ತು ಅತಿ ಕೆಳಗಡೆ ವಿದ್ಯುತ್ ತಂತಿ ಹಾದುಹೋಗಿರುವುದರಿಂದ ಜಮೀನಿನ ಕೆಲಸ ಮಾಡಲು ತೊಂದರೆಯಾಗಿದ್ದು ಮಾರ್ಗವನ್ನು ಸ್ಥಳಾಂತರಿಸಲು ಕೋರಿದರು.

ಸಭೆಯ ಅಧ್ಯಕ್ಷರು ಈ ವಿಷಯಕ್ಕೆ ಸಂಬಂಧಿಸಿದಂತೆ ಅರೇಹಳ್ಳಿ ಶಾಖಾಧಿಕಾರಿಯವರಿಗೆ ಮಾರ್ಗ ಮುಕ್ತತೆ ಪಡೆದು sag ಇರುವ ಮಾರ್ಗವನ್ನು ಸರಿಪಡಿಸುವಂತೆ ಸೂಚಿಸಿದರು ಮತ್ತು ತಮ್ಮ ಸ್ವಂತ ಖರ್ಚಿನಲ್ಲಿ ಮಾರ್ಗವನ್ನು ಬದಲಾಯಿಸಿಕೊಳ್ಳಬೇಕೆಂದು ಗ್ರಾಮಸ್ಥರುಗಳಿಗೆ ತಿಳಿಸಿ ಅರೇಹಳ್ಳಿ ಶಾಖಾಧಿಕಾರಿಯವರಿಗೆ ಶೀಘ್ರವಾಗಿ ಅಂದಾಜು ಪಟ್ಟಿಯನ್ನು ತಯಾರಿಸಲು ಸೂಚಿಸಲಾಯಿತು.

3. ಶ್ರೀ ಗಣೇಶ ಹಾಗೂ ಗ್ರಾಮಸ್ಥರು, ಮಲ್ಲಾಪುರ ರವರುಗಳು ಐ.ಪಿ. ಸ್ಥಾವರಗಳಿರುವ 63 kva ಪರಿವರ್ತಕ ಸುಟ್ಟು ಹೋಗಿದ್ದು ಪರಿವರ್ತಕವನ್ನು ಬದಲಾಯಿಸಿಕೊಡುವಂತೆ ಕೋರಿರುತ್ತಾರೆ.

ಸಭೆಯ ಅಧ್ಯಕ್ಷರು ಈ ವಿಷಯಕ್ಕೆ ಸಂಬಧಿಸಿದಂತೆ ಮಳೆಗಾಳಿಗೆ ಸುಮಾರು 162 ಸಂಖ್ಯೆಯ ಪರಿವರ್ತಕಗಳು ಸುಟ್ಟು ಹೋಗಿದ್ದು ಈಗಾಗಲೇ 121 ಸಂಖ್ಯೆಯ ಪರಿವರ್ತಕಗಳನ್ನು ಬೇಲೂರು ತಾಲ್ಲೂಕಿನಲ್ಲಿ ಈಗಾಗಲೇ ಬದಲಾಯಿಸಲಾಗಿರುತ್ತದೆ ಆದ್ದರಿಂದ ತಮ್ಮ ಗ್ರಾಮದ 63 kva ಪರಿವರ್ತಕವನ್ನು ಇನ್ನು 15 ದಿನದೊಳಗೆ ಬದಲಾಯಿಸಲಾಗುವುದೆಂದು ತಿಳಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಸಂಜೆ 5 : 00 ಕ್ಕೆ ಮುಕ್ತಾಯಗೊಳಿಸಲಾಯಿತು.**

4/9/18

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ–ವಿಭಾಗ, ಸೆಸ್ಕ್, ಬೇಲೂರು.

***ಯಥಾ ಪ್ರತಿಗಳನ್ನು ;***

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಕಛೇರಿ ಪ್ರತಿ.